ಬದುಕಿದೆನಾ? ಇಲ್ಲದಿದ್ದರೂ ನನ್ನ ತಂಗಿಯಂದಿರು ಹೇಳುವುದಿತ್ತು, ಭಾವಯ್ಯನಿಗೆ ಭಾವನೆಗಳೇ ಇಲ್ಲ ಅಂತ. ಆದರೆ ಇಷ್ಟು ಕೀಳು ಮಟ್ಟಕ್ಕೆ ಇಳೀತಾರ? ಇವರು ಮಾಡಿದ್ದು ಪ್ರಪಂಚಕ್ಕೆ ಗೊತ್ತಾದರೆ ಬದುಕಿ ಏನು ಪ್ರಯೋಜನ. ಇತ್ತೀಚೆಗೆ ಪೇಪರಲ್ಲಿ ತುಂಬಾ ವರದಿಗಳು ಬರುತ್ತಿವೆ. ಮಕ್ಕಳ ಕಳ್ಳರು ಇದ್ದಾರೆ ಅಂತ. ಅವರು ಮಕ್ಕಳನ್ನು ಕದ್ದು ಕಿಡ್ನಿ, ಕಣ್ಣು ಎಲ್ಲಾ ಮಾರಾಟ ಮಾಡಿ ಉಳಿದ ದೇಹವನ್ನು ಮಾಂಸ ಮಾಡುತ್ತಾರೆ ಅಂತೆ. ರಕ್ಕಸ ವಂಶದವರು. ಆದರೆ, ಇವರಿಗೇನಾಯಿತು? ಆ ಹಸುಳೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಬಿಟ್ಟು ಕಸಾಯಿಖಾನೆಗೆ...

ಅಷ್ಟರಲ್ಲಿ ಫೋನ್ ಕರೆ ಯಾವಾಗ ಕಟ್ ಆಗಿತ್ತೋ ಮತ್ತೆ ರಿಂಗಾಯಿತು. ಅವಳು ಬಾಚಿ ಅದನ್ನು ತೆಗೆದುಕೊಂಡು ನಡುಗುವ ಕೈಗಳಿಂದ ಫೋನನ್ನು ಕಿವಿಯ ಹತ್ತಿರ ತಂದಳು. ಅತ್ತ ಕಡೆಯಿಂದ ಅವಳ ಗಂಡ ಮಾತನಾಡುತ್ತಿದ್ದ.

''ಹಲೋ... ನಾನು ಸ್ವಲ್ಪ ಹೊತ್ತಿನಲ್ಲಿ ಬರುತ್ತೇನೆ. ನನಗೆ ಏನೂ ಆಗಿಲ್ಲ. ಇಲ್ಲಿ ಇವರು ಹೇಳದ್ದು ಕೇಳದಿದ್ದರೆ ಎಲ್ಲಿ ನನ್ನ ಇಲ್ಲ ಅನ್ನಿಸಿ ಬಿಡುತ್ತಾರೋ. ಏನೋ ಒಂದು ಮಾಡಿ ಬರುತ್ತೇನೆ. ಹಾಂ, ಸುಶಾಂತನ ಅಪ್ಪಅಮ್ಮ ಬಂದರೆ ಅವನನ್ನು ನಾನು ಕರೆದುಕೊಂಡು ಬಂದಿದ್ದೇನೆ ಎಂದು ತಪ್ಪಿಯೂ ಹೇಳಬೇಡ ಆಯಿತಾ? ಗೊತ್ತಿಲ್ಲಾ ಅಂದುಬಿಡು. ನಾನು ಆದಷ್ಟು ಬೇಗ ಬರುತ್ತೇನೆ. ಅಪ್ಪಿ ತಪ್ಪಿ ಬಾಯಿಬಿಟ್ಟರೆ ಜೋಕೆ'' ಅವಳು ಕೀರಲು ಸ್ವರದಲ್ಲಿ ಕೂಗಿಕೊಂಡಳು.

''ಬೇಡಾರಿ... ಪಾಪುವನ್ನು ಕಟುಕರ ಕೈಯಲ್ಲಿ ಕೊಡಬೇಡಿ... ಆಸ್ಪತ್ರೆಗೆ ಕರೆದುಕೊಂಡು ಹೋಗಿ. ಏನಾದರೂ ಸರಿ ನಾನು ನಿಮ್ಮ ಜೊತೆ ನಿಲ್ಲುತ್ತೀನಿ. ನಮ್ಮನ್ನು ಸಾಯಿಸಿದರೂ ಸರಿ. ಎಲ್ಲಿದ್ದೀರಿ ಹೇಳಿ?... ನಾನು ಈಗಲೇ ಬಂದೆ...'' ಅವಳು ಏನೇನೋ ಬಡಬಡಾಯಿಸುತ್ತಿದ್ದಳು. ಆತ ಅವನ ಮಾತು ಮುಗಿಸಿ ಫೋನ್ ಕಟ್ ಮಾಡಿದ್ದ. ನಿಧಾನವಾಗಿ ಅವಳ ಎಚ್ಚರ ತಪ್ಪುತ್ತಿತ್ತು. ಏನೇನೋ ಅಸ್ಪಷ್ಟ ಮಾತುಗಳು. ನೆರೆಕರೆ ಬಂಧು ಮಿತ್ರರು ಎಲ್ಲರೂ ಸೇರಿಕೊಂಡು ಸಿಕ್ಕ ಸಿಕ್ಕದರಲ್ಲಿ ಕುಮುದಿನಿಗೆ ಬಡಿಯುತ್ತಿದ್ದಾರೆ. ಅವಳಿಗೆ ಬೊಬ್ಬೆ ಹಾಕುವುದಕ್ಕೂ ಆಗುತ್ತಿಲ್ಲ.

''ಇವರಿಗೆ ಸುಮ್ಮನೆಯಾ ದೇವರು ಮಕ್ಕಳನ್ನು ಕೊಡದಿದ್ದದ್ದು. ಮಗುವನ್ನು ಮಾಂಸ ಮಾಡಿ ಮಾರಿದವರು. ಪಾಪ ಆ ಹಸುಳೆಯ ಅಮ್ಮನ ಸ್ಥಿತಿ ನೋಡಿದರೆ ಕರುಳು ಹಿಂಡುತ್ತೆ. ಹೆತ್ತರೆ ಅಲ್ವಾ ವಾತ್ಸಲ್ಯದ ಬೆಲೆ ಗೊತ್ತಾಗುವುದು. ಅಲ್ಲಾ ಇದೇನೋ ಆಗಿ ಸಿಕ್ಕಿಬಿದ್ದು ಗೊತ್ತಾಯಿತು. ಇದಕ್ಕಿಂತ ಮೊದಲು ಈ ಗಲ್ಲಿಯಲ್ಲಿ ಕಾಣೆಯಾದ ಮಕ್ಕಳನ್ನೆಲ್ಲಾ ಇವರೇ ಕದ್ದು ಮಾಂಸ ಮಾಡಿ ಮಾರಿದ್ದಾರೋ ಹೇಗೆ? ಅದೆಲ್ಲೋ ನೊಯಿಡಾದಲ್ಲಿ ಒಬ್ಬನ ಮನೆಯ



ಎದುರು ಚರಂಡಿಯಲ್ಲಿ ತುಂಬಾ ಮಕ್ಕಳ ಮೂಳೆಗಳು ಸಿಕ್ಕಿವೆಯಂತೆ ಅಲ್ವಾ, ಇವರ ಮನೆಯ ಕಪಾಟಿನಲ್ಲೂ ಇರಬಹುದು. ಮನುಷ್ಯರಲ್ಲ, ರಾಕ್ಷಸರು ಕಣ್ರೀ. ಜೀವಂತ ಬಿಡಬಾರದು. ಮೂಳೆ ಮುರಿಯುವ ತನಕ ಬಡಿಯಿರಿ. ಮೊದಲು ಪೊಲೀಸರಿಗೆ ಫೋನ್ ಮಾಡಿ. ತಪ್ಪಿಸಿಕೊಂಡು ಹೋದರೆ ಕಷ್ಟ. ಅವನು ಬಿಡಿ, ಇವಳು ಹೆಂಗರುಳು ಹೇಗೆ ಮನಸ್ಸು ಬರುತ್ತೆ. ತಾಟಕಿ ಕಣೇ.. ನೀನು ತಾಟಕಿ...'' ಕುಮುದಿನಿ ಜಗಲಿಯಲ್ಲಿ ಹೊರಳಾಡುತ್ತಿದ್ದಳು.